ಓ.ಎಸ್. ನಂಃ **37/2023**
<u>ಪಿಡಬ್ಲ್ಯೂಃ **2**</u>

ದಿನಾಂಕಃ 17-10-2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಂ ಬಿ ಪಿ ಹೆಚ್ ವಕೀಲರಿಂದಃ</u>

ಸರ್ವೆ ನಂ.37 ರಲ್ಲಿ ಒಟ್ಟು 11 ಎಕರೆ 13 ಗುಂಟೆ ಜಮೀನು ಇದೆ. ಸದರಿ ಒಟ್ಟು ಜಮೀನಿನ ಪೂರ್ವಕ್ಕೆ ಮಲ್ಲಪ್ಪ ಗುಂಡೇರ ರವರ ಜಮೀನು, ಪಶ್ಚಿಮಕ್ಕೆ ಹಣಮಂತ ತಂದೆ ಭೀಮಶಪ್ಪ ರವರ ಜಮೀನು, ಉತ್ತರಕ್ಕೆ ಪ್ರತಿವಾದಿಯರ ಜಮೀನು ಹಾಗೂ ದಕ್ಷಿಣಕ್ಕೆ ನಮ್ಮದೇ ಸರ್ವೆ ನಂ.53ರ ಜಮೀನು ಇರುತ್ತದೆ. ನಮ್ಮ ಹಾಗೂ ಪ್ರತಿವಾದಿಯರ ಜಮೀನು ಅಕ್ಕ-ಪಕ್ಕದಲ್ಲಿ ಇವೆ ಎಂದರೆ ಸರಿ.

ಸರ್ವೆ ನಂ.36 ರಲ್ಲಿನ ಪ್ರತಿವಾದಿಯರ ಜಮೀನು ಹಾಗೂ ದಾವಾ ಜಮೀನು ಒಂದಕ್ಕೊಂದು ಹೊಂದಿಕೊಂಡು ಇವೆ ಎಂದರೆ ಸರಿ. ಸರ್ವೆ ನಂ.36ರ ಜಮೀನು ಪ್ರತಿವಾದಿಯರಿಗೆ ಅವರ ಹಿರಿಯರಿಂದ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ತಮ್ಮ ಜಮೀನು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯರು ತಮ್ಮ ಜಮೀನು ಹದ್ದುಬಸ್ತ್ ಗುರುತಿಸಲು ಅರ್ಜಿ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ನಂತರ ಭೂ ಮಾಪನ ಇಲಾಖೆಯವರು ಅವರ ಜಮೀನು ಹದ್ದುಬಸ್ತ್ ಗುರುತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಪ್ರತಿವಾದಿಯರ ಒಟ್ಟು 23 ಗುಂಟೆ ಜಮಿನು ಒತ್ತುವರಿ ಮಾಡಿಕೊಂಡಿದ್ದೇವೆ ಎಂದು ಭೂ ಮಾಪಕರು ವರದಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ನ್ಯಾಯ ಪಂಚಾಯಿತಿ ಮಾಡಿದಾಗ ಸದರಿ ಜಮೀನನ್ನು ಪ್ರತಿವಾದಿಯರಿಗೆ ಬಿಟ್ಟು ಕೊಟ್ಟಿದ್ದೆವು ಎಂದರೆ ಸರಿಯಲ್ಲ. ಆ ನಂತರ ನಾವು ಈ ದಾವೆಯಲ್ಲಿ ಏಕಪಕ್ಷಿಯ ಮಧ್ಯಂತರ ತಡೆಯಾಜ್ಞೆ ಪಡೆದುಕೊಂಡು ಮತ್ತೆ ಪ್ರತಿವಾದಿಯರ ಜಮೀನು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಮ್ಮ ಜಮೀನು ಸ್ವಾದೀನಕ್ಕೆ ತೊಂದರೆ ನೀಡುತ್ತಿದ್ದಾರೆ ಎಂದು ದಾವೆಯಲ್ಲಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ಆ ರೀತಿ ಬರೆಸಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ಸ್ವಾದೀನ ರಕ್ಷಿಸಿಕೊಳ್ಳಲು ದಾವೆ ದಾಖಲಿಸಿದ್ದೇವೆ ಎಂದು ನುಡಿಯುತ್ತಾರೆ.ಪ್ರತಿವಾದಿಯರ

ಒತ್ತುವರಿ ಮಾಡಿಕೊಂಡ ಜಮೀನನ್ನು ಅವರಿಗೆ ಬಿಟ್ಟು ಕೊಡಬಾರದೆಂಬ ಉದ್ದೇಶದಿಂದ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ನಿಮ್ಮ ಜಮೀನು ಸ್ವಾಧೀನಕ್ಕೆ ಯಾವುದೇ ತೊಂದರೆ ನೀಡದಿದ್ದರು ಸುಳ್ಳು ದಾವೆ ದಾಖಲಿಸಿದ್ದೀರಿ ಎಂದರೆ ಸಾಕ್ಷಿಯು ಸರ್ವೆ ನಂ.37 ರಲ್ಲಿ ತಮ್ಮ ಜಮೀನು ಬರುತ್ತದೆ ಎಂದು ಪ್ರತಿವಾದಿಯರು ಹೇಳಿದ್ದರಿಂದ ದಾವೆ ದಾಖಲಿಸಿದ್ದೇವೆ ಎಂದು ನುಡಿಯುತ್ತಾರೆ. ಸರ್ವೆ ನಂ.37 ರಲ್ಲಿ ಒಟ್ಟು 05 ಹಿಸ್ಸೆಗಳು ಇದ್ದಾವೆ. ನಮ್ಮ ತಂದೆ ತಮ್ಮ ಹಿಸ್ಸೆಯ ಜಮೀನನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ